216(೩)

Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 28 ಸಂಚಿಕೆ 171] ಗುರುವಾರ 29—3—45 [5 ಪೈ

ಚೆನ್ನಾ ಬೆಳ್ಳಿ ಧಾರಣೆ

ಸವರನ್ 1 ಕ್ಕೆ	ರೂ. 50-0-0
ಚಿನ್ನ ತೊಲ 1 ಕ್ಕೆ	72-8-0
ಬೆಳ್ಳಿ "	1-5-0

ಮೈಸೂರು ಸಿಟಿ ರೇಷನಿಂಗ್

1945 ನೇ ಮಾರ್ಚ್ 31 ನೇ ತಾರೀಖಿನ ಸರ್ಕಾರಿ ಡಿಪೋ; ಸಬ್ ಗೋಡೌನುಗಳು, ಸರ್ಕಾರಿ ಡಿಪೋಗಳು ಮತ್ತು ಲೈಸನ್ಸ್ ವರ್ತಕರ ಅಂಗಡಿಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಮೈಸೂರು ಸಿಟಿಯಲ್ಲಿರುವ ಎಲ್ಲಾ ಮೊಹಲ್ಲಾ ಸಬ್ ಗೋಡೌನುಗಳೂ, ಸರ್ಕಾರಿ ಡಿಪೋಗಳೂ ಮತ್ತು ಲೈಸನ್ಸ್ ವರ್ತಕರ ಡಿಪೋಗಳೂ ಸಹ ಮುಚ್ಚಲ್ಪಡುತ್ತವೆ.

(ಸಹಿ) **ಟಿ. ವಿ. ರೆಡ್ಡಿ**
ಮೈಸೂರು ರೇಷನಿಂಗ ಆಫೀಸರ್
ತಾ|| 22-3-45 ಮೈಸೂರು ಸಿಟಿ

ಆಕಾಶವಾಣಿ 30—3—45

ವೃತ್ತಾಂತ ಬೆಳಿಗ್ಗೆ 8-50, ಮುದ್ರಾಕ್ಷ 2-50, ಸಾ. 6.30, 7.30, ರಾತ್ರಿ 10. ಬಿ. 8 ದೇವರನಾಮ 8-10 ಗೀತಾ ವಚನ 8-25 ಮುಖವೀಣೆ ಸಾ. 7 ಕರ್ನಾಟಕ ಹಾಡುಗಾರಿಕೆ 7—15 ದೇವೀಸ್ತೋತ್ರ ರಾ, 8-15 ಹಿಂದೂ ಸ್ಥಾನಿ ಹಾಡುಗಾರಿಕೆ.



ಐ. ಜೆ. ಹಾಲ್, ಸರಾಫ್ ಅಂಗಡಿ
ರಸ್ತೆ ಬೀದಿ, ಮೈಸೂರು.

ಹಿಟ್ಲರ್ ಪರಾರಿಯಾಗಲು ಸಿದ್ಧ

ಹಿಟ್ಲರ್ ಜರ್ಮನಿಯಿಂದ ಓಡಲು ಸಕಲ ಪ್ರಯತ್ನ ಮಾಡಿರುತ್ತಾನೆಂದು ಸ್ವಿಡ್ಜರ್‌ಲೆಂಡಿನಿಂದ ವಾರ್ತೆ ಬಂದಿದೆ.

ಂ ಂ

ಪ್ಯಾರಿಸ್ಸಿನಲ್ಲಿ ಒಬ್ಬ ಫ್ರೆಂಚ್ ಸ್ತ್ರೀಯು ತಾನು ಫ್ರೆಂಚರ ಸಂಗಡ ಕೆಲಸಮಾಡುವುದಕ್ಕಿಂತ ಜರ್ಮನರ ಸಂಗಡ ಕೆಲಸ ಮಾಡಲು ಇಚ್ಛಿಸುತ್ತೇನೆಂದು ಹೇಳಿದ್ದಕ್ಕೆ 5 ವರ್ಷ ಕಠಿಣ ಸಜವಾಯಿತು. ಅಂದರೆ ಜರ್ಮನರಿಗೆ ಸಹಾಯಕ್ಕಲ್ಲ, ಸಂಗಡ ಮಾತ್ರವೆಂದರ್ಥ.

ಂ ಂ

ಭಾರತದ ಬಿಕ್ಕಟ್ಟಿನ ಪರಿಹಾರದ ವಿಷಯದಲ್ಲಿ ಲಾರ್ಡ್ ವೇವೆಲ್ಲರು ಶ್ರೀ ಬಲ್ಲೂಭಾಯ್ ದೇಸಾಯಿಯವರ ಸಲಹೆಗೆ ಒತ್ತಾಯ ಕೊಡುವರೆಂದು ಲಂಡನ್ನಿನಲ್ಲಿ ನಂಬಲಾಗಿದೆ.

ಂ ಂ

ಮುನಸಿಗಂಜಿಸಲ್ಲಿ ಸರಿಯಾದಷ್ಟು ಒಟ್ಟಿಯಿಲ್ಲದೆ 1000 ಮಂದಿ ಗಂಡಸರೂ ಹೆಂಗಸರೂ ಮಕ್ಕಳೂ ಅರ್ಧ ಬಟ್ಟೆ ಉಟ್ಟು, ಬಟ್ಟೆಯಿಲ್ಲಾ ಎಂದು ಅಧಿಕಾರಿಗಳ ಬಂಗ್ಲೆ ಮುಂದೆ ಸೇರಿ ಬಟ್ಟೆ ರೇಷನಿಂಗು ಮಾಡಿರೆಂದು ಕೇಳಿಕೊಂಡರು.

ಂ ಂ

ತುರ್ಕಿಯಲ್ಲಿ 120 ಮಂದಿ ಗೆಸ್ಟಾಪೊ ಏಜೆಂಟರನ್ನು ವಿಚಾರಣೆಮಾಡಲಿರುವರು.

ಂ ಂ

ಬಂಗಾಳಾದಲ್ಲೂ ಸರ್ಕಾರಕ್ಕೆ ಬಡ್ಜೆಟ್ ವಿಷಯದಲ್ಲಿ ಸೋಲಾಯಿತು.

ಯುದ್ಧವಾರ್ತೆ ಕಳುಹಿಸುವ 19 ಅಮೇರಿಕ ಸಂಸ್ಥೆಯವರಿಗೆ ಪ್ರೆ || ರೂ ಸ್ವೆಲ್ಟರು 1120 ಮಿಲಿಯ ಡಾಲರ್ ಕೊಡುತ್ತಿರುವರು.

ಂ ಂ

ಕಾಂಗ್ರೆಸ್ಸಿನ ಮುಖಂಡರನ್ನೆಲ್ಲಾ ಬಿಡುಗಡೆ ಮಾಡಲು ಸಿಂಧ್ ಸರಕಾರವು ನಿರ್ಧರಿಸಿದೆ.

ಂ ಂ

ಇನ್ನು ಮುಂದೆ ಫೋನಿನಲ್ಲಿ ಯಾರೂ ಅನುಪಯೋಗವಾದ ಮಾತನಾಡದಿರಲು ಮದರಾಸು ಸರ್ಕಾರ ಎಚ್ಚರಿಸಿದೆ,

ಂ ಂ

ಮುಂಬೈನಲ್ಲಿ ಸಾರ್ವಜನಿಕ ಸಭೆಯಲ್ಲಿ ನಾಮಕರಣ ಸದಸ್ಯರನ್ನು ನೇಮಿಸುವುದನ್ನು ಮನ್ನಾ ಮಾಡಬೇಕೆಂದು ಬಹುಮತದಿಂದ ತೀರ್ಮಾನವಾಯಿತು. ಅಲ್ಲಿ 17 ಮಂದಿ ಸದಸ್ಯರಿರುವುದು ; ಅ ವೈಕಿ 3 ಮಂದಿ ಮಾತ್ರ ನಾಮಕರಣದವರು.

ಂ ಂ

ಮದರಾಸಿನ ಲಕ್ಷ್ಮೀಕಾಂತಂ ಖೂನಿ ಮೊಕದ್ದಮೆಯು ಪೆಷ್ಕರ್ನ್ಸ್ ವಿಚಾರಣೆಯಲ್ಲಿ, ಶ್ರೀರಾಮಲು ನಾಯ್ಡು ಪರ ಬೊಂಬಾಯಿನ ಶ್ರೀ ಕೆ. ಎಂ. ಮುನ್ಷಿಯವರೂ, ತ್ಯಾಗರಾಜಭಾಗವತರ ಪರ ಮಿ || ರೊಲೆಂಡ್ ಬ್ರಾಡೆಲ್ ಮತ್ತು ವಿ. ರಾಜಗೋಪಾಲಾಚಾರ್ಯರೂ, ಎಸ್. ಎಸ್. ಕೃಷ್ಣ ಪರ ಶ್ರೀ ವಿ. ಎಲ್ ಎತಿರಾಜ್ ಮತ್ತು ಗೋವಿಂದ ಸ್ವಾಮಿ ನಾಥರ್‌ರೂ ವಾದಿಸಲು ಪ್ರಕಾಲತ್ತು ಪಡೆದಿರುತ್ತಾರೆ.

ಯುದ್ಧ ವಾರ್ತೆ

ಮೆಕರೆಲಾವನ್ನು ಜಪಾನೀಯರು ಮತ್ತೆ ಹಿಡಿದುಕೊಂಡರು. ಕೆಯಾಕಿ ಕಡೆ ಬ್ರಿಟಿಷ್ ಸೇನೆ ಮುಂದೆ ಸುಗ್ಗಿದೆ. ಪ. ರಣರಂಗದಲ್ಲಿ ಜರ್ಮನರ ರಕ್ಷಣಾ ಸಾಲು ಕುಸಿದುಬೆತ್ತು. ಆದರೂ ಬರ್ಲಿನ್ನಿಗೆ ಹೋಗುವುದು ತಡವಾಗುವುದೆಂದು ಹೇಳಲಾಗಿದೆ. ಜರ್ಮನಿಯ ಶರಣಾಗತವನ್ನು ಒಪ್ಪುವುದಿಲ್ಲ. ಆಕ್ರಮಿಸಿ ನಂತರ ಸಂಧಾನ ನಡೆಸುತ್ತೇವೆ ಎಂದು ಮಿತ್ರರ ಮುಖ್ಯ ಸೇನಾಧಿಪತಿ ಐಸೆಹೋವರವರು ಹೇಳಿಕಳುಹಿಸಿದ್ದಾರೆ. ಡ್ಯಾನ್ಜಿಗ್ ಪತನ ಸನ್ನಿಹಿತವಾಗುತ್ತಿದೆ.

ಮೈಸೂರು ನಗರದ ಆಸ್ಪತ್ರೆಗೆ ಪೆನ್ಸಿಲಿನ್ ಕಳುಹಿಸಲಾಗಿದೆ.

ಂ ಂ

ಬೆಂಗಳೂರಿಂದ ತುಪ್ಪದ ವ್ಯಾಪಾರಿ ಜನಾಬ್ ಜಮಲುದ್ದೀನ್‌ರವರು ಹಿಂದೂ ಪುರದಿಂದ ಮೈಸೂರಿಗೆ 436 ಡಾಲ್ಡಾ ತುಪ್ಪದ ಟಿನ್ನನ್ನು ಸಾಗಿಸುವುದು ಪತ್ತೆಯಾಗಿ ರೂ. 500 ರೂಲ್ಡಾನೆಯಾಯಿತು. ಡಾಲ್ಡಾ ಹರಾಜಿನಿಂದ ಸರಕಾರಕ್ಕೆ ರೂ. 11200 ಉತ್ಪತ್ತಿಯಾಯಿತು.

ಂ ಂ

ಮದರಾಸಿನಲ್ಲಿ ಎಂಟರ್ ಟೇನ್ಮೆಂಟ್‌ತೆರಿಗೆ ಶೇಕಡ 50 ರಷ್ಟು ಹೆಚ್ಚಿಸಿದೆ.

ಂ ಂ

ಮುಂಬೈನಲ್ಲಿ ಈವರೆಗೆ 150 ಮುಧಗಳನ್ನು ಮಿಲಿಟರಿಯವರಿಗಾಗಿ ವಶಮಾಡಿಕೊಳ್ಳಲ್ಪಟ್ಟಿವೆ.

ಂ ಂ

ಗಡಿನಾಡಿನಲ್ಲಿ ಫೆಬ್ರವರಿಯಿಂದ 6000 ಉಪಾಧ್ಯಾಯರು ಸಂಬಳ ಸಾಲದೆಂದು ಮುಷ್ಕರ ಹಿಡಿದಿದ್ದರು. ಈಗ ಕೆಲಸಕ್ಕೆ ಹಿಂದಿರುಗಿದರು.

ಂ ಂ

ಪದಾರ್ಥದ ಬೆಲೆ ವರ್ತಕರು ಹೆಚ್ಚಿಸದಿರಲು ಮದರಾಸ ಸರ್ಕಾರ ಅನೇಕ ಪದಾರ್ಥಗಳನ್ನು ತಾವೆಕೊಂಡು ವಿತರಣೆ ಮಾಡಲು ನಿರ್ಧರಿಸಿದೆ.

ವಿವಿಧ ವಿಷಯ

ಭಾರತದ ಭವಿಷ್ಯ ಭಾರತೀಯರೇ ನಿರ್ಧರಿಸಬೇಕೆಂದು ಸೈರೋಪಿಯಲ್ಲಿ ಅಗಾ ಖಾರ್ಕರವರು ಹೇಳಿದರು.

ಂ ಂ

ವ್ಯಸೆ ಮಠ ಇಲ್ಲದೆ ಮದರಾಸ್ ಬೀದಿಗಳಲ್ಲಿ ೦೦೦೦೦ ಜನರು ವಾಸ ಮಾಡುತ್ತಿರುವುರು.

ಂ ಂ

ಬೆಸಿಗೆ ಕಾಲವಾದ್ದರಿಂದ ಮದರಾಸು ಪಟ್ಟಣದಲ್ಲಿ ಎಲೆಟ್ರಿಕ್ ಶಕ್ತಿ ತೀರಡ ೨೫ ರಂತೆ ಹೆಚ್ಚಿಸಲು ಸರ್ಕಾರದ ಆಜ್ಞೆಯಾಗಿದೆ.

ಂ ಂ

ಕೊಚ್ಚಿನ್‌ಲ್ಲಿ ಸರ್ಕಾರಿ ನೌಕರರ ಪತ್ನಿಯರು ಮಹಾಜನಾವಣೆಯಲ್ಲಿ ಭಾಗವಹಿಸಕೂಡದೆಂದು ಆಜ್ಞೆಯಾಗಿದೆ.

ಂ ಂ

500 ಅಮೇರಿಕ ಕಾರ್ಖೇಗಾರರು 35000 ಟ್ಯಾಸಿಗಳನ್ನು ಮೆಕಾನಿಕ್‌ರನ್ನಾಗಿ ತಯಾರು ಮಾಡಲು ಚೈನಾಕ್ಕೆ ಇಷ್ಟರಲ್ಲೆ ಹೊರಡುವರು.

ಬ್ರಿಟನ್ನಿನಿಂದ ಭಾರತಕ್ಕೆ 2000 ಮೋಟಾರು ಕಾರುಗಳು ಬರಲಿವೆ.

ಂ ಂ

ಚೀನಿ ಸೇನೀಕರಿಗೆ ಇದೇ ಏಪ್ರಲ್ 1 ರಿಂದ ಪ್ರತಿಯೊಬ್ಬನಿಗೂ 3600 ಕಲೋರಿ ಆಹಾರ ಮತ್ತು 600 ಗ್ರಾಂ ಪ್ರೋಟೀನ್ ಮತ್ತು ಅಧಿಕವಾಗಿ ಲವಣ ವಿಟಮಿನ್ ಆಹಾರ ಕೊಡಲು ಅಮೇರಿಕಾದವರು ಅನುಕೂಲ ಪಡಿಸಿರುತ್ತಾರೆ.

ಂ ಂ

ಉತ್ತರ ಚೈನಾದ 25 ಪ್ರಾಂತ್ಯಗಳಲ್ಲಿ ಮಳೆಯಿಲ್ಲದೆ ಬೆಳೆಯೆಲ್ಲಾ ನಾಶವಾಗಿ ಜನರು ಕ್ಷಾಮ ಪೀಡಿತರಾಗಿರುವರು ಆಹಾರ ಕೂಡಲೆ ಬಾರದಿದ್ದರೆ ಒಹು ಜನರು ಸಾಯುವ ಸ್ಥಿತಿಗೆ ಬರುವರು.

ಂ ಂ

ಹಿಟ್ಲರ್‌ನನ್ನು ಯಾವ ರೀತಿ ಶಿಕ್ಷೆ ಮಾಡಬೇಕೆಂದು ' ಒಬ್ಬ ಅಮೇರಿಕ ನೀಗ್ರೋ ಯುವತಿಯನ್ನು ಕೇಳಲು, ಹಿಟ್ಲರಿನ ಮುಖಕ್ಕೆ ಕಪ್ಪು ಮಸಿ ಬಳಿದು ಅಮೆರಿಕಾಕ್ಕೆ ಕಳುಹಿಸಿ ' ಎಂದಳಂತೆ.

ಶುದ್ಧವಾದುದೆಂದು ಗ್ಯಾರಂಟಿ. ಯಾವ ಅಪರಿಶುದ್ಧವಾದ ಪದಾರ್ಥ ಮಿಶ್ರವಾಗಿಲ್ಲ. ದೇವತಾಕಾರ್ಯಗಳಲ್ಲೂ, ಪೂಜಾಕಾರ್ಯಕ್ಕೂ, ಔಷಧಗಳಿಗೂ, ಆಹಾರಗಳಿಗೂ, ಶುಭ ಸಂತೋಷ ಕಾರ್ಯಗಳಲ್ಲಿಯೂ ಉಪಯೋಗಿಸಲರ್ಹವಾಗಿದೆ.

.... ಶ್ರೀ ಓಂ ಬ್ರಾಂಡ್ ಕೇಸರಿ ....

ಕೇಸರಿಯನ್ನು ಗಿರಾಕಿಗಳ ಅನುಕೂಲಕ್ಕಾಗಿ 1 ತೊಲ, 5 ತೊಲ, 1 ಪೌಂಡ ಅಥವ ಹೆಚ್ಚಾಗಿ ಬಿಕರಿಗೆ ಇಡಲಾಗಿದೆ.

ಸಾವರ್ಕ ಬ್ರಾಂಡ್

ಓಂ ಬ್ರಾಂಡ್ ಕೇಸರಿಯ ಪುಡಿಯನ್ನು ಕಾಲು ತೊಲ, ಅರ್ಧ ತೊಲ, ಒಂದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬಿಕರಿಗೆ ಏರ್ಪಾಡಾಗಿದೆ

ಅಲ್ಲದೆ ಪುಡಿ ಮತ್ತು ವಿಶ್ರ ಕೇಸರಿಯನ್ನು 16/1 ತೊಲ, 8/1 ತೊಲ, 1/4 ತೊಲ, ಅರ್ಧ ತೊಲ, ಒಂದು ತೊಲ ಐದು ತೊಲ ಮತ್ತು ಚಿಲ್ಲರೆಯಾಗಿಯೂ ಬಿಕರಿಗೆ ಇಟ್ಟಿದೆ. ಇವು ಹೊಟಲ್ ಉಪಯೋಗಕ್ಕೆ ಉಪಯುಕ್ತವಾದುದು. ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ಎಲ್ಲಾ ವರ್ತಕರು ಈ ಕೇಸರಿಯನ್ನು ಮಾರುವರು. ಮತ್ತು —

ವಲ್ಲಭದಾಸ್ ತೇಜ್ ಪಾಲ್ ಹಿಂಗು, ಕೇಸರಿ, ಪಚ್ಚಕರ್ಪೂರ ವರ್ತಕರು

14. ಗೋವಿಂದಪ್ಪ ನಾಯಿಕ್ ಬೀದಿ ಬಿ.ಟಿ. ಮದರಾಸ್.

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಕಿಕ್ಕಿರಿದ ಜನಸಂದಣಿಯಿಂದ ತುಂಬಿದ ಅಮೋಘ 2 ನೇ ವಾರ

At Ranjit Pagli Duniya

ರಣಜಿತ್ ಟಾಕೀಸಿನಲ್ಲಿ

ಪಗಲಿ ದುನಿಯಾ

(ಹಿಂದಿ)

ನುಮ್ತಾಜ್ ಶಾಂತಿ ಮೋತಿಲಾಲ್ ಷೇಕ್‌ಮುಕ್ತಾರ್

ಪಾತ್ರವಹಿಸಿರುವರು

AT OPERA — DOST

ಅಪೆರಾ ಟಾಕೀಸ್ 2 ನೇ ವಾರ

ಮೋತೀಲಾಲ್, ನೂರ್‌ಜಹಾನ್ ಪಾತ್ರವಹಿಸಿರುವ

ದೋಸ್ತ್ (ಹಿಂದಿ)

— NEXT CHANGE —

Air Raid Wardens

With Stan Laurel & Oliver Hardy

TALK-A-TONE

(The Pioneer Film-mag of S. India)

From 1-3-45 Re. 1 per copy.

Local Agent—D. Mahaadev

Opera Talkies, Mysore

Good Coffee

Sastry's Coffee Rooms

Chamarajapuram, Mysore

For Good Printing—

L. N. Press

Srirampet MYSORE

ಅಂದವಾದ ಹೊಲಿಗೆಗೆ

ರೆಡಿಮೇಡ್ ಬಟ್ಟೆಗೆ

— ನಮ್ಮಲ್ಲಿ ಬನ್ನಿ —

ಶ್ರೀ ಮಹಾಲಕ್ಷ್ಮಿ ಹಾಲ್

ಸಯ್ಯಾಜಿರಾವ್ ರಸ್ತೆ. ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore